

# ಈ ನಕ್ಷೆಯೊಳಗೆ...

ಈ ನಕ್ಷೆಯೊಳಗೆ ನಾನೆಷ್ಟರವನೊ!
ಹೇಳಣ್ಣ ಜಾಣ,
ನಾನೆಷ್ಟರವನೊ ನೀನೆಷ್ಟರವನೊ!

ಖಗೋಲ ಮಂಡಲದ ಸೂರ್ಯಕೋಟಿ
ಚಂದ್ರಪ್ರಭಾ, ಕೆಂಡದ ಚೆಂಡಿನ ಉಂಡೆಯಾಗಿ
ಉರುಳಿದ ನೆಲ ಜಲ ಜೀವ ಜಗತ್ತು, ನಿಸರ್ಗ
ತಾಯಿಯ ಮಕ್ಕಳಲ್ಲಿ ಏಳು ಖಂಡಗಳು ತಾನೆ!

ಅಲ್ಲಿ ನಾನೊಬ್ಬ ನೀನೊಬ್ಬ ಜಗದ ಸಕಲರು
ಮತ್ತೇಕೆ ನಾಕದ ಮಾತು ನಿನಗೆ, ಅಂದಿತ್ತು
ಕವಿವಾಣಿ, 'ಸಗ್ಗವ ನೇರಲು ಬಯಸುವು
ದೇತಕೆ, ಅಂದದ ಚಂದದ ಭೂಮಿಗೆ ಬಂದು!'

ಒಂದೊಂದು ತಾರೆ ಒಂದೊಂದು ಸಣ್ಣದೊಡ್ಡ
ಸೂಲೀದೇವತಾನೆ? ಇನ್ನೂ ಚಂದ್ರನ ಭೇದಿ
ಸದ ನಾವು, ಸಾಧ್ಯವೇ ಭೇದಿಸುವುದು ಈ
ಜನುಮದಲಿ, ಒಪ್ಪಿಕೊ ನಿನ್ನ ಇತಿಮಿತಿಯ ಜಾಣ!
ಒಪ್ಪಿಕೊ ಒಪ್ಪಿಕೊ ಒಪ್ಪಿಕೊ ನನ್ನ ನಿನ್ನ ಮರಣ!
ಆದುವೆ ಜೀವಂತ ಕಾರಣ.

● ವಿಷ್ಣು ನಾಯ್ಕ

ಕಲೆ: ಡಿ.ಕೆ. ರಮೇಶ್